# ಕರ್ನಾಟಕ ಸರ್ಕಾರದ “ಕನ್ನಡ ಮತ್ತು ಸಂಸ್ಕೃತಿ ಇಲಾಖೆ” ವತಿಯಿಂದ “67ನೇ ಕರ್ನಾಟಕ ರಾಜ್ಯೋತ್ಸವ”ದ ಅಂಗವಾಗಿ “ಕೋಟಿ ಕಂಠ ಗಾಯನ”

## 28-10-2022














ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
VIDYAVARDHAKA FIRST GRADE COLLEGE


ರಂಗ ಮಂಟಪ














ಕರ್ನಾಟಕ ಸರ್ಕಾರದ **"ಕನ್ನಡ ಮತ್ತು ಸಂಸ್ಕೃತಿ ಇಲಾಖೆ"** ವತಿಯಿಂದ **"67ನೇ ಕರ್ನಾಟಕ ರಾಜ್ಯೋತ್ಸವ"**ದ ಅಂಗವಾಗಿ ದಿನಾಂಕ:28.10.2022ರ ಶುಕ್ರವಾರದಂದು **"ಕೋಟಿ ಕಂಠ ಗಾಯನ"** ಕಾರ್ಯಕ್ರಮವನ್ನು ನಮ್ಮ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಆಯೋಜಿಸಲಾಗಿತ್ತು. ಕಾಲೇಜಿನ 500 ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಜರಿದ್ದು ಕಾರ್ಯಕ್ರಮದಲ್ಲಿ ಸಮೂಹ ಗಾಯನವನ್ನು ನೆರವೇರಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಘನ ಸರ್ಕಾರವು ಸೂಚಿಸಿದ್ದ **'ನನ್ನ ನಾಡು – ನನ್ನ ಹಾಡು'** ಸಮೂಹ ಗೀತೆ ಗಾಯನದಲ್ಲಿ ಕನ್ನಡ ನಾಡು–ನುಡಿಯ ಶ್ರೇಷ್ಠತೆಯನ್ನು ಸಾರುವ ಕೆಳಕಂಡ ಹಾಡುಗಳನ್ನು ಹಾಡಲಾಯಿತು.

ಅ) **ನಾಡಗೀತೆ**

ಆ) ಹುಯಿಲಗೋಳ ನಾರಾಯಣರಾಯರ **'ಉದಯವಾಗಿ ನಮ್ಮ ಚೆಲುವ ಕನ್ನಡ ನಾಡು'**

ಇ) ರಾಷ್ಟ್ರಕವಿ ಕುವೆಂಪುರವರ **'ಬಾರಿಸು ಕನ್ನಡ ಡಿಂಡಿಮವ'**

ಈ) ಡಾ.ಡಿ.ಎಸ್.ಕರ್ಕಿಯವರ **'ಹಚ್ಚೇವು ಕನ್ನಡದ ದೀಪ'**

ಉ) ನಾಡೋಜ ಡಾ.ಚೆನ್ನವೀರ ಕಣವಿಯವರ **'ವಿಶ್ವವಿನೂತನ ವಿದ್ಯಾಚೇತನ'**

ಊ) ಡಾ.ಹಂಸಲೇಖರವರ **'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು'**

ಕಾರ್ಯಕ್ರಮವು ಸ್ವಾಗತದೊಂದಿಗೆ ಪ್ರಾರಂಭವಾಗಿ ಗೀತೆಗಳನ್ನು ಗಾಯನ ಮಾಡಿದನಂತರ ಸಂಕಲ್ಪವಿಧಿಯನ್ನು ಬೋಧಿಸಲಾಯಿತು. ರಾಷ್ಟ್ರಗೀತೆ ಗಾಯನದ ನಂತರ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.